**ಕರ್ನಾಟಕ ಸರ್ಕಾರ**

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**

**ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

---

**ಸಂಖ್ಯೆ : ವಾಇ : ಉ ನಿ : ಸುಮಪ : 2017–18** **ದಿನಾಂಕ: 1–09–2017**

# ಪತ್ರಿಕಾ ಆಮಂತ್ರಣ

**1. ಪತ್ರಿಕಾಗೋಷ್ಠಿ:**

**ತನ್ವೀರ್ ಸೇಠ್,**
**ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು,**

**ದಿನಾಂಕ: : 4–09–2017, ಸೋಮವಾರ, ಸಮಯ: ಮಧ್ಯಾಹ್ನ 12–00 ಗಂಟೆಗೆ**

**ಸ್ಥಳ: ಶಿಕ್ಷಕರ ಸದನ, ಕೆಂಪೇಗೌಡ ರಸ್ತೆ, ಬೆಂಗಳೂರು.**

**2. ಪ್ರೊ. ಎಸ್. ಜಿ. ಸಿದ್ಧರಾಮಯ್ಯ ಅವರ ನೇತೃತ್ವದಲ್ಲಿ "ಸರ್ಕಾರಿ ಶಾಲೆಗಳನ್ನು ಸದೃಢಗೊಳಿಸಿ ಗುಣಮಟ್ಟದ ಶಿಕ್ಷಣ ನೀಡುವ ದೃಷ್ಟಿಯಿಂದ ಸುಧಾರಿಸಬಹುದಾದ ಅಗತ್ಯ ಕ್ರಮಗಳನ್ನು ಶಿಫಾರಸ್ಸು ಮಾಡುವ ಕುರಿತ "ಅಂತಿಮ ವರದಿ" ಮುಖ್ಯಮಂತ್ರಿಗಳಿಗೆ ಸಲ್ಲಿಸುವ ಕುರಿತು**

**ವರದಿ ಸ್ವೀಕರಿಸುವವರು:**

ಸಿದ್ದರಾಮಯ್ಯ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ
ದಿನಾಂಕ: : 4–09–2017, ಸೋಮವಾರ, ಸಮಯ: ಮಧ್ಯಾಹ್ನ 01–00 ಗಂಟೆಗೆ
ಸ್ಥಳ: ಗೃಹ ಕಚೇರಿ "ಕೃಷ್ಣಾ",. ಬೆಂಗಳೂರು.

**3. ವೃಷಭಾವತಿ ವ್ಯಾಲಿ, ಕೆ ಮತ್ತು ಸಿ ವ್ಯಾಲಿ, ಹೆಬ್ಬಾಳ ಮತ್ತು ದೊಡ್ಡಬೆಲೆಯಲ್ಲಿ ಒಟ್ಟು 440 ಎಂ.ಎಲ್.ಡಿ. ಸಾಮರ್ಥ್ಯದ ತ್ಯಾಜ್ಯ ನೀರು ಶುದ್ಧೀಕರಣ ಘಟಕಗಳ ಶಂಕುಸ್ಥಾಪನಾ ಸಮಾರಂಭ.**

**ಶಂಕುಸ್ಥಾಪನೆ:**
ಸಿದ್ದರಾಮಯ್ಯ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ.

**ಅಧ್ಯಕ್ಷತೆ:**
ಮುನಿರತ್ನ, ಶಾಸಕರು, ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರ, ಬೆಂಗಳೂರು.

ದಿನಾಂಕ: 4–09–2017, ಸೋಮವಾರ, ಸಮಯ: ಸಂಜೆ 4–00 ಗಂಟೆಗೆ

ಸ್ಥಳ: ವೃಷಭಾವತಿ ವ್ಯಾಲಿ, ತ್ಯಾಜ್ಯ ನೀರು ಶುದ್ಧೀಕರಣ ಘಟಕದ ಆವರಣ, ನಾಯಂಡಹಳ್ಳಿ, ಮೈಸೂರು ರಸ್ತೆ, ಬೆಂಗಳೂರು.

4. " Nyaya Samyoga " Inauguration of Legal Assistance Establishment (Multiple Services-Single Point establishment)

**Inauguration:**

**Shri Justice Subhro Kamal Mukherjee, Chief Justice, High Court of Karnataka and Patron-in-Chief, Karnataka State Legal Services Authority**

**Presence of**

**Shri Justice Jayant Patel, Judge, High Court of Karnataka & Executive Chairman, Karnataka State Legal Services Authority**

**Date: 4-09-2017 Monday, Time: 5-15 P.M.**

**Place: Karnataka State Legal Services Authority, Nyaya Degula, 1st Floor, H. Siddaiah Road, Bengaluru – 560 027.**

**ಪತ್ರಿಕಾ ಪ್ರಕಟಣೆ**

ಸಂಖ್ಯೆ: 1/128

## ನೂತನ ಸಚಿವರಾಗಿ ಪ್ರಮಾಣ ವಚನ ಸ್ವೀಕಾರ

**ಬೆಂಗಳೂರು ಸೆ. 1 (ಕರ್ನಾಟಕ ವಾರ್ತೆ)**

ಕರ್ನಾಟಕ ರಾಜ್ಯ ಸರ್ಕಾರದ ಸಚಿವ ಸಂಪುಟದ ನೂತನ ಸಂಪುಟ ದರ್ಜೆಯ ಸಚಿವರಾಗಿ ಹೆಚ್. ಎಂ. ರೇವಣ್ಣ ಮತ್ತು ಆರ್. ಬಿ. ತಿಮ್ಮಾಪುರ ಅವರು ಪ್ರಮಾಣ ವಚನ ಸ್ವೀಕರಿಸಿದರು.

ಡಾ. ಎಂ.ಸಿ. ಮೋಹನಕುಮಾರಿ (ಗೀತಾ ಮಹದೇವಪ್ರಸಾದ್) ಅವರು (ಸ್ವತಂತ್ರ ಪ್ರಭಾರ) ರಾಜ್ಯ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು.

ಹೆಚ್.ಎಂ. ರೇವಣ್ಣ ಹಾಗೂ ಆರ್.ಬಿ. ತಿಮ್ಮಾಪುರ ಅವರು ದೇವರ ಹೆಸರಿನಲ್ಲಿ ಹಾಗೂ ಡಾ. ಎಂ.ಸಿ. ಮೋಹನಕುಮಾರಿ ಅವರು ಮಲೆ ಮಹದೇಶ್ವರನ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು.

ರಾಜ್ಯಪಾಲರಾದ ವಜುಭಾಯಿ ರೂಡಾಭಾಯಿ ವಾಲಾ ಅವರು ಅಧಿಕಾರ ಮತ್ತು ಗೋಪ್ಯತಾ ಪ್ರಮಾಣ ವಚನ ಬೋಧಿಸಿದರು.

ರಾಜಭವನದ ಗಾಜಿನಮನೆಯಲ್ಲಿ ಇಂದು ಸಂಜೆ ನಡೆದ ಈ ಸಮಾರಂಭಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಸರ್ಕಾರದ ಮುಖ್ಯ ಕಾರ್ಯದರ್ಶಿ ಸುಭಾಸ್‌ಚಂದ್ರ ಕುಂಠಿಆ, ಸಚಿವ ಸಂಪುಟದ ಸದಸ್ಯರು, ಶಾಸಕರು, ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

ಎಸ್‌ಎಂ:ಕೆಎನ್‌ವಿ:ಜೆಡಿ:ಜಿಪಿಆರ್.

ಸಂಖ್ಯೆ: 2/129

<u>ವ್ಯಕ್ತಿ ಪರಿಚಯ:</u>

1. <u>ಎಂ.ಸಿ. ಮೋಹನ್ ಕುಮಾರಿ</u>

**ಎಂ. ಸಿ. ಮೋಹನ್ ಕುಮಾರಿ ಅವರು 04-02-1961 ರಂದು ಮೈಸೂರಿನಲ್ಲಿ ಜನಿಸಿದರು. ಶ್ರೀಮತಿಯವರು ಪಿ.ಹೆಚ್.ಡಿ. ಮಾಡಿದ್ದು, ವ್ಯಾಪಾರದಲ್ಲಿ ತೊಡಗಿಸಿಕೊಂಡಿರುತ್ತಾರೆ.**

**2013 ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಆಯ್ಕೆಯಾಗಿದ್ದ ಶ್ರೀ ಮಹಾದೇವಪ್ರಸಾದ್ ಹೆಚ್.ಎಸ್. ರವರ ನಿಧನದಿಂದ ತೆರವಾದ ಸ್ಥಾನಕ್ಕೆ 2017 ರಲ್ಲಿ ನಡೆದ ಉಪ ಚುನಾವಣೆಯಲ್ಲಿ 14ನೇ ವಿಧಾನಸಭೆಗೆ ಆಯ್ಕೆಯಾಗಿರುತ್ತಾರೆ**

**ಸಾಹಿತ್ಯ, ಕಲೆ ವಿಜ್ಞಾನದಲ್ಲಿ ಅಪಾರ ಆಸಕ್ತಿಯಿರುವ ಇವರು ಕನ್ನಡದಲ್ಲಿ 2 ಹಾಗೂ ಇಂಗ್ಲೀಷ್‌ನಲ್ಲಿ 3 ಕೃತಿಗಳ ರಚನೆ ಮಾಡಿರುತ್ತಾರೆ.**

**ಅಲ್ಲದೆ, ಇವರು ಯು.ಎಸ್.ಎ. ಆಸ್ಟ್ರೇಲಿಯ, ಸ್ವಿಜರ್‌ಲೆಂಡ್ ಹಾಗೂ ಇಂಗ್ಲೇಂಡ್ ದೇಶಗಳಲ್ಲೂ ಪ್ರವಾಸಮಾಡಿ ಹೆಚ್ಚಿನ ಅನುಭವವನ್ನು ಪಡೆದಿರುತ್ತಾರೆ.**

**ಇದೀಗ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸಚಿವ ಸಂಪುಟದಲ್ಲಿ ರಾಜ್ಯ ಸಚಿವರಾಗಿ ಅಧಿಕಾರವನ್ನು ಸ್ವೀಕರಿಸಿದ್ದಾರೆ.**

## 2. ಶ್ರೀ ಹೆಚ್. ಎಂ. ರೇವಣ್ಣ:

ಶ್ರೀ ಹೆಚ್. ಎಂ. ರೇವಣ್ಣ ಅವರು ಮೂಲತ: ರಾಮನಗರ ಜಿಲ್ಲೆಯ ಹೊಸಪೇಟೆಯವರು. ಶ್ರೀಯುತರ ಜನ್ಮ ದಿನಾಂಕ : **08-11-1949.** ಇವರು ಬಿಎಸ್ಸಿ ಪದವೀಧರರು.

ದಿನಾಂಕ **01-07-2014** ರಿಂದ **30-06-2020** ರವರೆಗೆ ಕರ್ನಾಟಕ ವಿಧಾನ ಪರಿಷತ್ತು ಹಾಗೂ ವಿಧಾನಸಭೆಯಲ್ಲಿ ಸದಸ್ಯರಾಗಿ ಕಾರ್ಯನಿರ್ವಹಣೆ.

**1989** ರಲ್ಲಿ ನಡೆದ **9** ನೇ ವಿಧಾನಸಭಾ ಚುನಾವಣೆಯಲ್ಲಿ ವಿಧಾನಸಭಾ ಸದಸ್ಯರಾಗಿ ಆಯ್ಕೆಯಾಗಿ ತದನಂತರ ವೀರಪ್ಪ ಮೊಯಿಲಿಯವರ ಸಚಿವ ಸಂಪುಟದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾಗಿ ನಂತರ ಸಂಪುಟ ಪುನರ್ ರಚನೆಯಾದಾಗ ಕೃಷಿ ಸಚಿವರಾಗಿ ಕಾರ್ಯನಿರ್ವಹಿಸಿರುತ್ತಾರೆ.

**1999** ರಲ್ಲಿ ನಡೆದ **11** ನೇ ವಿಧಾನಸಭಾ ಚುನಾವಣೆಯಲ್ಲಿ ಆಯ್ಕೆಯಾಗಿ ರೇಷ್ಮೆ ಮತ್ತು ಜವಳಿ ಖಾತೆ ಸಚಿವರಾಗಿ ಕಾರ್ಯನಿರ್ವಹಿಸಿದ್ದರು.

ಇದೀಗ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸಚಿವ ಸಂಪುಟದಲ್ಲಿ ಸಂಪುಟ ದರ್ಜೆಯ ಸಚಿವರಾಗಿ ಅಧಿಕಾರ ಸ್ವೀಕರಿಸಿದ್ದಾರೆ.

## 3. ರಾಮಪ್ಪ ಬಾಳಪ್ಪ ತಿಮ್ಮಾಪೂರ:

ರಾಮಪ್ಪ ಬಾಳಪ್ಪ ತಿಮ್ಮಾಪುರ ಅವರು ಮೂಲತ: ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕಿನ ಉತ್ತೂರುನವರು. ದಿನಾಂಕ **01-06-1962** ರಲ್ಲಿ ಜನಿಸಿದರು.

ಶ್ರೀಯುತರು ಬಿ.ಎ., ಎಲ್.ಎಲ್.ಬಿ. ಪದವೀಧರರಾಗಿದ್ದು, ವೃತ್ತಿಯಲ್ಲಿ ಕೃಷಿಕರಾಗಿರುತ್ತಾರೆ.

ಶ್ರೀಯುತರು ವಿಧಾನ ಪರಿಷತ್ ಸದಸ್ಯರಾಗಿ, ಕೆ.ಪಿ.ಸಿ.ಸಿ. ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿರುತ್ತಾರೆ.

**1993 ರಲ್ಲಿ ಕೈಮಗ್ಗ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿ, 1995 ರಲ್ಲಿ ರಾಜ್ಯ ಕೃಷಿ ಮಾರುಕಟ್ಟೆ ಸಚಿವರಾಗಿ, 2002 ರಲ್ಲಿ ಯೋಜನಾ, ಸಾಂಸ್ಥಿಕ ಹಣಕಾಸು ಮತ್ತು ಸಾಂಖ್ಯಿಕ ಸಚಿವರಾಗಿ, 2003 ರಲ್ಲಿ ಕೆ.ಪಿ.ಸಿ.ಸಿ. ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿರುತ್ತಾರೆ.**

**ಇದೀಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಚಿವ ಸಂಪುಟದಲ್ಲಿ ಸಂಪುಟ ದರ್ಜೆಯ ಸಚಿವರಾಗಿ ಅಧಿಕಾರ ಸ್ವೀಕರಿಸಿದ್ದಾರೆ.**

ಸಂಖ್ಯೆ: 3/130

## ಬಕ್ರೀದ್ : ರಾಜ್ಯದ ಜನತೆಗೆ ಮುಖ್ಯಮಂತ್ರಿ ಶುಭಾಶಯ

ಬೆಂಗಳೂರು, ಸೆಪ್ಟೆಂಬರ್ 1 ( ಕರ್ನಾಟಕ ವಾರ್ತೆ) :

ತ್ಯಾಗದ ಹಬ್ಬ ಎಂದೇ ಎಲ್ಲೆಡೆ ಜನಪ್ರಿಯವಾಗಿರುವ ಬಕ್ರೀದ್ ಅಥವಾ ಈದ್-ಅಲ್-ಅಝಾ ಸುಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯದ ಜನತೆಗೆ, ವಿಶೇಷವಾಗಿ ರಾಜ್ಯದ ಎಲ್ಲಾ ಮುಸಲ್ಮಾನ ಬಾಂಧವರಿಗೆ ಶುಭ ಹಾರೈಸಿದ್ದಾರೆ.

ನಿಷ್ಕಲ್ಮಶ ಭಕ್ತಿಗೆ ಅಲ್ಲಾಹ್‌ನ ಅನುಗ್ರಹ ಇದ್ದೇ ಇರುತ್ತದೆ ಎಂಬುದನ್ನು ಬಲವಾಗಿ ಪ್ರತಿಪಾದಿಸುವುದರ ಸಂಕೇತವಾಗಿರುವ ಬಕ್ರೀದ್ ಹಬ್ಬವು ತ್ಯಾಗದ ಶ್ರೇಷ್ಠತೆಯನ್ನು ಸಾಬೀತುಪಡಿಸುತ್ತದೆ. ಬಹುಶಃ ಈ ಹಿನ್ನೆಲೆಯಲ್ಲಿಯೇ, ಬಕ್ರೀದ್ ಹಬ್ಬದ ಸುಸಂದರ್ಭವನ್ನು ಪವಿತ್ರ ಹಜ್ ಯಾತ್ರೆಗೆ ಅತ್ಯುತ್ತಮ ಕಾಲ ಎಂದು ಬಣ್ಣಿಸುತ್ತಾರೆ.

ಬಂಧು-ಮಿತ್ರರು, ನೆರೆ-ಹೊರೆಯವರು ಹಾಗೂ ಬಡವರು-ಕಡುಬಡವರೊಂದಿಗೆ ಹಬ್ಬದೂಟವನ್ನು ಸವಿದು ಸಂಭ್ರಮಿಸಲು ವಿಶೇಷ ವೇದಿಕೆಯಾಗಲಿರುವ ಬಕ್ರೇದ್ ಹಬ್ಬವು ಬಡವ-ಬಲ್ಲಿದ ಎಂಬ ಬೇಧ-ಭಾವವಿಲ್ಲದೆ ಎಲ್ಲರೊಂದಿಗೆ ಸುಮಧುರ ಬಾಂಧವ್ಯವನ್ನು ಬೆಸೆಯಲು ಮಾನವೀಯ ಸ್ಪರ್ಶ ಕಲ್ಪಿಸುತ್ತದೆ.

ಬಕ್ರೀದ್ ಹಬ್ಬವು ನಮ್ಮೆಲ್ಲರನ್ನೂ ಒಗ್ಗೂಡಿಸಲಿ. ಕೋಮು ಸೌಹಾರ್ಧತೆ ಮೂಡಿಸಲು ಪ್ರೇರಣೆ ಹಾಗೂ ಸ್ಫೂರ್ತಿಯನ್ನು ನೀಡುವ ಮೂಲಕ ಸಮೃದ್ಧ ಕರ್ನಾಟಕವನ್ನು ರೂಪಿಸಲು ಹಾಗೂ ಬಲಿಷ್ಠ ಭಾರತವನ್ನು ನಿರ್ಮಿಸಲು ಬಕ್ರೀದ್‌ನ ಸಡಗರ ಮತ್ತು ಸಂಭ್ರಮ ನಮ್ಮೆಲ್ಲರಿಗೂ ಶಕ್ತಿಯನ್ನೀಯಲಿ ಎಂದು ಸಿದ್ದರಾಮಯ್ಯ ಅವರು ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ.

***************

ಡಿ ಪಿ ಎಂ

ಸಂಖ್ಯೆ: 4/131

## ನನ್ನ ವಿರುದ್ಧದ ಆರೋಪಗಳು ಆಧಾರ-ರಹಿತ ಹಾಗೂ ಸತ್ಯಕ್ಕೆ ದೂರ : ಡಾ ಸುಭಾಷ್‌ಚಂದ್ರ ಕುಂಟಿಆ

**ಬೆಂಗಳೂರು, ಸೆಪ್ಟೆಂಬರ್ 1 ( ಕರ್ನಾಟಕ ವಾರ್ತೆ) :**

ಕೇಂದ್ರದ ಸೇವೆಗೆ ಎರವಲು ತೆರಳಲು ಯತ್ನಿಸುತ್ತಿರುವ ಮುಖ್ಯ ಕಾರ್ಯದರ್ಶಿ ರಾಜ್ಯ ಸರ್ಕಾರದ ದೈನಂದಿನ ಕಾರ್ಯಚಟುವಟಿಕೆಗಳಲ್ಲಿ ಆಸಕ್ತಿ ತೋರುತ್ತಿಲ್ಲ ಎಂದು ಕೆಲವು ಮಾಧ್ಯಮಗಳಲ್ಲಿ ಹೊರಹೊಮ್ಮಿರುವ ಆರೋಪಗಳನ್ನು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ ಸುಭಾಷ್‌ಚಂದ್ರ ಕುಂಟಿಆ ಅವರು ಸಾರಾಸಗಟಾಗಿ ತಳ್ಳಿ ಹಾಕಿದ್ದಾರೆ.

ನನ್ನ ವಿರುದ್ಧದ ಆರೋಪಗಳು ಆಧಾರ-ರಹಿತ ಹಾಗೂ ಸತ್ಯಕ್ಕೆ ದೂರವಾದದು. ಇಂತಹ ಕಪೋಲಕಲ್ಪಿತ ಕಥೆಗಳು ಕೆಲವರಿಗೆ ಸಂತಸ ಉಂಟು ಮಾಡಬಹುದು. ಆದರೆ, ಪ್ರಾಮಾಣಿಕ ಅಧಿಕಾರಿಗಳಿಗೆ ನೋವುಂಟು ಮಾಡುತ್ತವೆ. ಪ್ರತಿದಿನವೂ ಪತ್ರ ವ್ಯವಹಾರಗಳು ಹಾಗೂ ಕಡತ ವಿಲೇವಾರಿಯತ್ತ ವೈಯುಕ್ತಿಕ ಗಮನಹರಿಸಿ ಕರ್ನಾಟಕದ ಅಭ್ಯುದಯಕ್ಕಾಗಿ ಶ್ರಮಿಸುತ್ತಿರುವ ತಮಗೆ ಇಂತಹ ವದಂತಿಗಳಿಂದ ನೋವಾಗಿದೆ ಎಂದು ಡಾ ಸುಭಾಷ್‌ಚಂದ್ರ ಕುಂಟಿಆ ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

***************

ಡಿ ಪಿ ಎಂ

ಸಂಖ್ಯೆ: 5/131

## ನೋಟು ಅಪಮೌಲ್ಯೀಕರಣದಿಂದ ದೇಶದ ಆರ್ಥಿಕತೆಯಲ್ಲಿ ಕುಸಿತ

## – ಆರ್. ವಿ. ದೇಶಪಾಂಡೆ

**ಬೆಂಗಳೂರು, ಸೆಪ್ಟೆಂಬರ್ 1 ( ಕರ್ನಾಟಕ ವಾರ್ತೆ) :**

**ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ ಯ 48ನೇ ಸಭೆಯು ಒಟ್ಟು 3596 ಕೋಟಿ ರೂ. ಬಂಡವಾಳ ಹೂಡಿಕೆಯ ವಿವಿಧ ಯೋಜನೆಗಳಿಗೆ ಒಪ್ಪಿಗೆ ನೀಡಿದ್ದು, 3842 ಜನರಿಗೆ ಉದ್ಯೋಗಾವಕಾಶ ಲಭ್ಯವಾಗಲಿದೆ ಎಂದು ಕೈಗಾರಿಕಾ ಸಚಿವ ಆರ್. ವಿ. ದೇಶಪಾಂಡೆ ಅವರು ತಿಳಿಸಿದರು.,**

ಅವರು ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಕೋರಮಂಗಲದಲ್ಲಿ 1110 ಕೋಟಿ ರೂ. ಗಳ ವೆಚ್ಚದಲ್ಲಿ ಮೆ. ಓವಿಎಸ್. ಮೋಟರ್ಸ್ ಲಿಮಿಟೆಡ್, ನಾಗಾವಾರದ ಗ್ರೀನ್ ಹಾರ್ಟ್ 4ನೇ ಹಂತದಲ್ಲಿ 810 ಕೋಟಿ ರೂ. ವೆಚ್ಚಲಿ ಶ್ರೀ ಐಕೆಇಎ ಇಂಡಿಯ ಪ್ರೈ. ಲಿ., ಸರ್ಜಾಪುರ ರಸ್ತೆ, ಬೆಳಂದೂರು ಗೇಟ್ ಬಳಿ 710 ಕೋಟಿ ರೂ. ವೆಚ್ಚದಲ್ಲಿ ಮೆ: ಶಾಹಿ ಎಕ್ಸ್‌ಪೋರ್ಟ್ಸ್ ಪ್ರೈ. ಲಿ. ಮಂಗಳೂರಿನಲ್ಲಿ 966 ಕೋಟಿ ರೂ. ಗಳ ವೆಚ್ಚದಲ್ಲಿ ಮೆ: ಮಂಗಳೂರು ರಿಫೈನರಿ ಮತ್ತು ಪೆಟ್ರೋಕೆಮಿಕಲ್ಸ್ ಲಿ., ಯೋಜನೆಗಳಿಗೆ ಉನ್ನತ ಮಟ್ಟದ ಸಮಿತಿಯು ಒಪ್ಪಿಗೆ ನೀಡಿದೆ ಎಂದು ಮಾಹಿತಿ ನೀಡಿದರು.

**ನೋಟು ಅಪಮೌಲ್ಯೀಕರಣದಿಂದ ಆರ್ಥಿಕ ಹಿನ್ನಡೆ:**

ನೋಟು ಅಪಮೌಲ್ಯೀಕರಣದಿಂದ ಆರ್ಥಿಕ ಹಿನ್ನಡೆ ಉಂಟಾಗಿದೆ ಎಂದು ಸಚಿವ ಆರ್. ವಿ. ದೇಶಪಾಂಡೆ ಅವರು ಅಭಿಪ್ರಾಯಪಟ್ಟರು.

ಕೇಂದ್ರ ಸರ್ಕಾರದ ನೋಟು ಅಪಮೌಲ್ಯೀಕರಣದ ಉದ್ದೇಶ ಸಂಪೂರ್ಣವಾಗಿ ವಿಫಲವಾಗಿದೆ. 2014 ರಿಂದ ದೇಶದ ಆರ್ಥಿಕ ಸ್ಥಿತಿ ಉತ್ತಮಗೊಂಡು ಜಿಡಿಪಿ ಶೇ. 6 ಕ್ಕೆ ಏರಿತ್ತು. ಆದರೆ ಕಳೆದ 40 ತಿಂಗಳ ಅವಧಿಯಲ್ಲಿ ಕುಸಿಯತೊಡಗಿ ಶೇ. 2 ಕ್ಕೆ ಇಳಿದಿದೆ ಎಂದರು.

ಪಿಎಸ್ಐ.

ಸಂಖ್ಯೆ: 6/132

## "ಬೆಳ್ಳಿಹೆಜ್ಜೆ" ಯಲ್ಲಿ ನಮ್ಮೊಂದಿಗೆ ಪಿ. ಆರ್. ರಾಮದಾಸ್ ನಾಯ್ಡು

ಬೆಂಗಳೂರು, ಸೆ. 1 (ಕರ್ನಾಟಕ ವಾರ್ತೆ)

ಕರ್ನಾಟಕ ಚಲನಚಿತ್ರ ಅಕಾಡೆಮಿ ವತಿಯಿಂದ ಸೆಪ್ಟೆಂಬರ್ 2 ರ ಶನಿವಾರದಂದು ಸಂಜೆ 5-00 ಗಂಟೆಗೆ ನಗರದ ಮಹಾದೇವ ದೇಸಾಯಿ ಸಭಾಂಗಣ, ಗಾಂಧಿ ಭವನ ಕುಮಾರಕೃಪಾ ರಸ್ತೆ, ಬೆಂಗಳೂರು ಇಲ್ಲಿ ನಡೆಯಲಿರುವ ಬೆಳ್ಳಿಹೆಜ್ಜೆ ಕಾರ್ಯಕ್ರಮದಲ್ಲಿ ಅಂದು ನಮ್ಮೊಂದಿಗೆ ಪಿ. ಆರ್. ರಾಮದಾಸ್ ನಾಯ್ಡು ಅವರು ಪಾಲ್ಗೊಳ್ಳಲಿದ್ದಾರೆ ಎಂದು ಕರ್ನಾಟಕ ಚಲನಚಿತ್ರ ಅಕಾಡೆಮಿಯ ರಿಜಿಸ್ಟ್ರಾರ್ ಹೆಚ್. ಬಿ. ದಿನೇಶ್ ಅವರು ತಿಳಿಸಿದ್ದಾರೆ.

ಎಸ್ಎಂ:ಜೆಡಿ:ಜಿಪಿಆರ್.

ಸಂಖ್ಯೆ 7/133

## ಶೀಘ್ರಲಿಪಿಗಾರರ ಅಂತಿಮ ಆಯ್ಕೆಪಟ್ಟಿ
## ವೆಬ್‌ಸೈಟ್‌ನಲ್ಲಿ ಪ್ರಕಟ

ಬೆಂಗಳೂರು,, **ಸೆ. 1** (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗವು ರಾಜ್ಯ ಸಿವಿಲ್ ಸೇವೆಗಳಡಿಯ ವಿವಿಧ ಇಲಾಖೆಗಳಲ್ಲಿನ 181 ಶೀಘ್ರಲಿಪಿಗಾರರ ಹುದ್ದೆಗಳ ಅಂತಿಮ ಆಯ್ಕೆಪಟ್ಟಿಯನ್ನು ಆಯೋಗದ ಅಂತರ್ಜಾಲದಲ್ಲಿ **http://kpsc.kar.nic.in** ನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಿದೆ.

ಎಸ್‌ಎಂ:ಜೆಡಿ:ಜಿಪಿಆರ್.

ಸಂಖ್ಯೆ 8/134

## 2020 ರ ಒಲಂಪಿಕ್‌ನಲ್ಲಿ ಆರೋಹಣ ಕ್ರೀಡೆಯು ಅಧಿಕೃತ ಕ್ರೀಡೆ

– ಅನುಪಮ್ ಅಗ್ರವಾಲ್

ಬೆಂಗಳೂರು,, **ಸೆ. 1** (ಕರ್ನಾಟಕ ವಾರ್ತೆ)

2020 ರ ಒಲಂಪಿಕ್ಸ್‌ನಲ್ಲಿ ಆರೋಹಣ ಕ್ರೀಡೆಯು ಅಧಿಕೃತ ಕ್ರೀಡೆಯಾಗಿ ಸೇರ್ಪಡೆಯಾಗಿದ್ದು, ಈ ಹಿನ್ನೆಲೆಯಲ್ಲಿ ಯುವ ಕ್ರೀಡಾಪಟುಗಳನ್ನು ಉತ್ತೇಜಿಸುವ ನಿಟ್ಟಿನಲ್ಲಿ, ಬೌಲ್ಡರಿಂಗ್ ಚಾಂಪಿಯನ್‌ಶಿಪ್ ಏರ್ಪಡಿಸಲಾಗುತ್ತಿದೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ನಿರ್ದೇಶಕ ಅನುಪಮ್ ಅಗರ್‌ವಾಲ್ ಅವರು ತಿಳಿಸಿದರು.

ಅವರು ಇಂದು ಇಂದು ಕೋರಮಂಗಲದ ಒಳಾಂಗಣ ಕ್ರೀಡಾಂಗಣದಲ್ಲಿ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡುತ್ತಾ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಅಂಗ ಸಂಸ್ಥೆಯಾದ ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿಯು (ಚೇತನಾ), ಕರ್ನಾಟಕ ಪ್ರವಾಸೋದ್ಯಮ ಇಲಾಖೆ ಹಾಗೂ ಭಾರತೀಯ ಪರ್ವತಾರೋಹಣ ಸಂಸ್ಥೆ (IMF) ಸಹಯೋಗದಲ್ಲಿ ಕರ್ನಾಟಕ ಸರ್ಕಾರದ

ವತಿಯಿಂದ ಇದೇ ಸೆಪ್ಟಂಬರ್ 1 ಹಾಗೂ 2 ರಂದು ಪ್ರಥಮ ಬಾರಿಗೆ ಬೆಂಗಳೂರು ಬೌಲ್ಡರಿಂಗ್ ಚಾಂಪಿಯನ್‌ಶಿಫ್ – 2017 ಅನ್ನು ಉದ್ಘಾಟಿಸಿ ಮಾತನಾಡಿದರು.

ಭವಿಷ್ಯದ ಉತ್ತಮ ಕ್ರೀಡಾಪಟುಗಳಿಗೆ ಸ್ಫೂರ್ತಿ ನೀಡುವ ಆಶಯದೊಂದಿಗೆ ಈ ಕ್ರೀಡಾಕೂಟವನ್ನು ಸಂಘಟಿಸಲಾಗುತ್ತಿದೆ. ಈ ಕ್ರೀಡಾಕೂಟವನ್ನು ಮತ್ತಷ್ಟು ಅತ್ಯಾಕರ್ಷಕವಾಗಿ ಮಾಡಲು ಭಾರತೀಯ ಆರೋಹಣ ಸಂಸ್ಥೆಯು ದಿನಾಂಕ: 02–09–2017 ರಂದು ಪ್ರಶಸ್ತಿ ವಿಜೇತ ಪರ್ವತಾರೋಹಣದ ಚಲನ ಚಿತ್ರವನ್ನು ಪ್ರದರ್ಶಿಸಲಾಗುವುದು ಎಂದು ಅವರು ತಿಳಿಸಿದರು.

ಬೆಂಗಳೂರು ನಗರವನ್ನು ಆರೋಹಣ ಕ್ರೀಡೆಯಲ್ಲಿ ಪ್ರಮುಖ ಕೇಂದ್ರವನ್ನಾಗಿ ಮಾರ್ಪಾಡು ಮಾಡುವ ನಿಟ್ಟಿನಲ್ಲಿ ಈ ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಕೂಟವನ್ನು ಅಂತರತಾಷ್ಟ್ರೀಯ ಕ್ರೀಡಾರೋಹಣ ಸಂಸ್ಥೆ (International Federation of Sports Climbing) - IFSC ಮಾನದಂಡದಂತೆ ಸಂಘಟಿಸುತ್ತಿದ್ದು, ಸುಮಾರು 12 ವಿದೇಶಿ ಕ್ರೀಡಾಪಟುಗಳು ಸೇರಿದಂತೆ ದೇಶದ ಅತ್ಯುತ್ತಮ ಆರೋಹಣ ಕ್ರೀಡಾಪಟುಗಳು ಒಂದೇ ವೇದಿಕೆಯಡಿಯಲ್ಲಿ ಸ್ಪರ್ಧಿಸಲಿದ್ದಾರೆ ಎಂದು ಅವರು ತಿಳಿಸಿದರು.

ಎಸ್‌ಎಂ:ಕೆಎನ್‌ವಿ:ಜೆಡಿ:ಜಿಪಿಆರ್.

ಸಂಖ್ಯೆ 9/135

## ಸೆಪ್ಟೆಂಬರ್ 5 ರಿಂದ 8 ರವರೆಗೆ "ಅಂತರರಾಷ್ಟ್ರೀಯ ವಿಚಾರ ಸಂಕಿರಣ" ಮತ್ತು ಸುವರ್ಣ ಮಹೋತ್ಸವ

**ಬೆಂಗಳೂರು, ಸೆ. 1 (ಕರ್ನಾಟಕ ವಾರ್ತೆ)**

ನಗರದ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಯು ಕಳೆದ 5 ದಶಕಗಳಿಂದ 200 ಕ್ಕೂ ಹೆಚ್ಚು ಅಧಿಕ ಇಳುವರಿ ತಳಿ, ಸಂಕರಣ ತಳಿ, ಮೌಲ್ಯವರ್ಧನೆ, ರೈತೋಪಯೋಗಿ ತಂತ್ರಜ್ಞಾನಗಳನ್ನು ಕಂಡುಹಿಡಿದಿದ್ದು, ಈ ಎಲ್ಲಾ ಸಾಧನೆಗಳನ್ನು ಪ್ರತಿಬಿಂಬಿಸುವ "ಅಂತರರಾಷ್ಟ್ರೀಯ ವಿಚಾರ ಸಂಕಿರಣ" ಮತ್ತು ಸುವರ್ಣ ಮಹೋತ್ಸವ ಆಚರಣೆಯನ್ನು ಇದೇ ಸೆಪ್ಟೆಂಬರ್ 5 ರಿಂದ 8 ರವರೆಗೆ ನಗರದ ಜೆ.ಎನ್. ಟಾಟಾ ಸಭಾಂಗಣದಲ್ಲಿ ಹಮ್ಮಿಕೊಂಡಿದೆ ಎಂದು ಸಂಸ್ಥೆಯ ನಿರ್ದೇಶಕ ಎಂ.ಆರ್. ದಿನೇಶ್ ಅವರು ತಿಳಿಸಿದರು.

ಹೆಸರಘಟ್ಟದಲ್ಲಿರುವ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಯ ಆವರಣದಲ್ಲಿ ಇಂದು ಕರೆಯಲಾಗಿದ್ದ ಪತ್ರಿಕೋಷ್ಠಿಯನ್ನುದ್ದೇಶಿಸಿ ಮಾತನಾಡುತ್ತಿದ್ದ ಅವರು, ಸೆಪ್ಟೆಂಬರ್ 4 ರಂದು ಸಂಜೆ 4–00 ಗಂಟೆಗೆ ಜೆ.ಎನ್. ಟಾಟಾ ಸಭಾಂಗಣ, ಸರ್. ಸಿ.ವಿ. ರಾಮನ್ ಅವೆನ್ಯೂ, ಇಲ್ಲಿ ನಡೆಯುವ ಸುವರ್ಣ ಮಹೋತ್ಸವದ ಉದ್ಘಾಟನಾ ಸಮಾರಂಭದಲ್ಲಿ ರಾಜ್ಯಪಾಲರಾದ ವಜುಭಾಯಿ ರೂಢಾಭಾಯಿ ವಾಲಾ, ಕೇಂದ್ರ ಕೃಷಿ ಸಚಿವ ರಾಧಾಮೋಹನ್ ಸಿಂಗ್, ಉಪ ಮಹಾನಿರ್ದೇಶಕ ಡಾ. ಎ. ಕೆ. ಸಿಂಗ್ ಸೇರಿದಂತೆ ಹಲವು ಗಣ್ಯರು ಪಾಲ್ಗೊಳ್ಳಲಿದ್ದಾರೆ ಎಂದರು.

ಈ ಐದು ದಿನದ ಅಂತರರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ 17 ರಾಷ್ಟ್ರಗಳು ಭಾಗವಹಿಸಲಿದ್ದು, 44 ಅಂತರ ರಾಷ್ಟ್ರೀಯ ಹಾಗೂ ರಾಷ್ಟ್ರೀಯ ವಿಜ್ಞಾನಿಗಳು ಭಾಗವಹಿಸಲಿದ್ದಾರೆ. ತೋಟಗಾರಿಕೆಯಲ್ಲಿರುವ ಉದಯೋನ್ಮುಖ ಪ್ರವೃತ್ತಿಗಳಾದ ತಳಿಶಾಸ್ತ್ರ, ಕೊಯ್ಲೋತ್ತರ, ಜಾಗತಿಕ ತೋಟಗಾರಿಕೆ, ಹವಾಮಾನ ಬದಲಾವಣೆ, ಉತ್ಪಾದನೆಯಲ್ಲಿನ ಸಮಸ್ಯೆಗಳ ಕುರಿತಂತೆ ಚರ್ಚಿಸಲಾಗುವುದು ಎಂದರು.

ರೈತರಿಗೆ ಉಪಯುಕ್ತವಾಗುವಂತಹ ತೋಟಗಾರಿಕಾ ತರಬೇತಿ ಕೇಂದ್ರಗಳನ್ನು ಸ್ಥಾಪನೆ, ರೈತರು ಬೆಳೆದಂತಹ ಬೆಳಗೆ ಮಾರುಕಟ್ಟೆ ಸೌಲಭ್ಯವನ್ನು ಒದಗಿಸುವಿಕೆ, ಹೈಬ್ರೀಡ್ ತಳಿ ಮತ್ತು ಬೀಜಗಳನ್ನು ತಯಾರಿಸಿ ಅವುಗಳನ್ನು ಕಡಿಮೆ ದರದಲ್ಲಿ ರೈತರಿಗೆ ಮಾರಾಟ ಮಾಡಲಾಗುತ್ತಿದೆ ಎಂದು ವಿವರಿಸಿದರು.

ಸಾವಯವ ಕೃಷಿಗೆ ಒತ್ತು ಕೊಡುವ ರೀತಿಯಲ್ಲಿ ತಳಿಗಳ ಅಭಿವೃದ್ಧಿ, ಸುಮಾರು 7,000 ನಾಟಿ ಮತ್ತು ವಾಣಿಜ್ಯ ಹಣ್ಣು ಮತ್ತು ತರಕಾರಿ ತಳಿಗಳ ಸಂರಕ್ಷಣೆ, ಉಷ್ಣ ವಲಯಕ್ಕೆ ಬೇಕಾದ ಹಣ್ಣಿನ ಬೆಳೆಗಳ ಅಭಿವೃದ್ಧಿ, ಹಸಿರು ಮನೆ ಒಳಗೆ ಸಾವಯವ ಕೃಷಿ, ನೀರು ನಿರ್ವಹಣೆ, ಮಳೆನೀರು ಕೊಯ್ಲು ಮತ್ತು ಮೌಲ್ಯಧಾರಿತ ಉತ್ಪನ್ನಗಳ ಬಗ್ಗೆ ಮಾಹಿತಿ, ನೂರಾರು ತಂತ್ರಜ್ಞಾನಗಳ ಬಿಡುಗಡೆಯನ್ನು ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಯು ಕಳೆದ 50 ವರ್ಷಗಳಿಂದ ಕೈಗೊಂಡಿದೆ ಎಂದು ವಿವರಿಸಿದರು.

ವಿಜ್ಞಾನಿಗಳಾದ ಡಾ. ಸಿ. ಅಶ್ವತ್ಥ್, ಡಾ. ಎ.ಟಿ. ಸದಾಶಿವ, ಡಾ. ಸಿ.ಕೆ. ನಾರಾಯಣ, ಡಾ. ಬಿ. ನಾರಾಯಣ ಸ್ವಾಮಿ ಅವರುಗಳು ಉಪಸ್ಥಿತರಿದ್ದರು.

ಎಸ್‌ಎಂ:ಎಂಆರ್‌ಎಂ:ಜಿಪಿಆರ್.

ಸಂಖ್ಯೆ 10/136

# <u>2022 ರ ವೇಳೆಗೆ ರೈತರ ಆದಾಯವನ್ನು ದ್ವಿಗುಣಗೊಳಿಸಲು ಏಳು ಅಂಶಗಳ ಕಾರ್ಯಕ್ರಮ</u>

ಬೆಂಗಳೂರು, ಸೆ. 1 (ಕರ್ನಾಟಕ ವಾರ್ತೆ)

2022 ರ ವೇಳೆಗೆ ರೈತರ ಆದಾಯವನ್ನು ದ್ವಿಗುಣಗೊಳಿಸಲು ಕೇಂದ್ರ ಸರ್ಕಾರ ಏಳು ಅಂಶಗಳ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ ಎಂದು ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಹಾಗೂ ಸಂಸದೀಯ ವ್ಯವಹಾರಗಳ ಸಚಿವ ಅನಂತಕುಮಾರ್ ಅವರು ತಿಳಿಸಿದರು.

ಅವರು ಇಂದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಹಾಗೂ ಭಾರತೀಯ ಕೃಷಿ ಅನುಸಂಧಾನ ಪರಿಷತ್, ನವದೆಹಲಿಯ ಸಹಯೋಗದಲ್ಲಿ ಕೇಂದ್ರದ (ಜಿಕೆವಿಕೆ) ಕುವೆಂಪು ಸಭಾಂಗಣದಲ್ಲಿ ಹಮ್ಮಿಕೊಳ್ಳಲಾದ ಸಂಕಲ್ಪದಿಂದ ಸಿದ್ದಿ–ದೃಢ ನಿಶ್ಚಯದಿಂದ ಸಾಧನೆಯತ್ತ ನ್ಯೂ ಇಂಡಿಯಾ ಮೂಮೆಂಟ್ (2017–2022) ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಕೇಂದ್ರ ಸರ್ಕಾರವು ರೈತರ ಆದಾಯವನ್ನು ದ್ವಿಗುಣಗೊಳಿಸುವ ನಿಟ್ಟಿನಲ್ಲಿ ಖಚಿತ ಆದಾಯಕ್ಕಾಗಿ ಎಲ್ಲರೂ ಬೆಳೆ ವಿಮೆ ಮಾಡಿಸುವಂತೆ, ಸಾವಯವ ಕೃಷಿಗೆ ಆದ್ಯತೆ ನೀಡಿ ಮಣ್ಣು ಆರೋಗ್ಯ ತಂತ್ರ ಪಡೆದುಕೊಳ್ಳುವಂತೆ, ಅಧಿಕ ಇಳುವರಿ ನೀಡುವ ಬಿತ್ತನೆ ಬೀಜ ಹಾಗೂ ಸಸಿಗಳನ್ನು ಬಳಸುವಂತೆ ಕೃಷಿಕರೇ ತಮ್ಮ ಬೆಳೆಗಳ ಮೌಲ್ಯವರ್ಧನೆ ಮಾಡುವುದರ ಜೊತೆಗೆ ಆಹಾರ ಧಾನ್ಯಗಳನ್ನು ಸೂಕ್ತ ರೀತಿಯಲ್ಲಿ ಶೇಖರಿಸುವಂತೆ ಈ ಏಳು ಅಂಶಗಳ ಕಾರ್ಯಕ್ರಮದ ಕುರಿತು ಕೃಷಿಕರಿಗೆ ಪ್ರತಿಜ್ಞೆಮಾಡಿಸಿದ್ದರು.

ಹವಾಮಾನ ವೈಪರೀತ್ಯದಿಂದ ರೈತ ಸಂಕಷ್ಟಕ್ಕೆ ಸಿಲುಕಿದ್ದಾನೆ. ಆದರೂ ಸಹ ಕಳೆದ 70 ವರ್ಷಗಳಿಗೆ ಹೋಲಿಸಿದರೆ ಈ ವರ್ಷ ದೇಶದ ರೈತ ಆಹಾರ ಪದಾರ್ಥಗಳನ್ನು ಬೆಳೆದು ಶತಮಾನದ ದಾಖಲೆ ನಿರ್ಮಿಸಿದ್ದಾನೆ. 2022 ರ ವೇಳಗೆ ಭಾರತ ಜಗತ್ತಿನ ಸೂಪರ್ ಪವರ್ ದೇಶವಾಗುವುದರಲ್ಲಿ ಸಂಶಯವಿಲ್ಲ ಎಂದರು.

ಕೇಂದ್ರ ಸರ್ಕಾರ ರೈತರಿಗಾಗಿ ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆಯಲ್ಲಿ ರೈತರಿಗೆ ಬೆಳೆ ವಿಮೆ ಸೌಲಭ್ಯ ಕಲ್ಪಿಸಿದೆ. ದೇಶಾದ್ಯಂತ ಜನೌಷಧಿ ಮಳಿಗೆಯಲ್ಲಿ ಕಡಿಮೆ ಬೆಲೆಯಲ್ಲಿ ಹೃದಯಕ್ಕೆ ಅಳವಡಿಸುವ ಸ್ಟಂಟ್‌ಗಳು, ಮಂಡಿ ಚಿಪ್ಪುಗಳನ್ನು ಸಹ ಕೇಂದ್ರ ಸರ್ಕಾರ ನೀಡುತ್ತಿದೆ ಎಂದರು.

ಕೇಂದ್ರ ಸಾಂಖ್ಯಿಕ ಮತ್ತು ಯೋಜನೆ ಅನುಷ್ಠಾನ ಸಚಿವರಾದ ಡಿ.ವಿ. ಸದಾನಂದ ಗೌಡ ಅವರು ಮಾತನಾಡಿ 2022 ರ ವೇಳೆಗೆ ಎಲ್ಲಾ ರೈತರು ಸ್ವಾಭಿಮಾನಿಗಳಾಗಿರಬೇಕು. ಬೆಳೆ ವಿಮೆ, ಹನಿ ನೀರಾವರಿ ಯೋಜನೆಗಳನ್ನು ಸದುಪಯೋಗಪಡಿಸಿಕೊಳ್ಳಬೇಕೆಂದರು.

ಕಾರ್ಯಕ್ರಮದಲ್ಲಿ ಡಿ.ಎ.ಸಿ. ನವದೆಹಲಿಯ ಜಂಟಿ ಕಾರ್ಯದರ್ಶಿ ನೀರಜ್ ಎ. ಉಪಸ್ಥಿತರಿದ್ದರು, ಕೃಷಿ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಹೆಚ್. ಶಿವಣ್ಣ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಎಸ್‌ಎಂ:ಕೆಎನ್‌ಕೆ:ಜೆಡಿ:ಜಿಪಿಆರ್.

ಸಂಖ್ಯೆ 11/137

## “ವಿಶೇಷ ಶಿಕ್ಷಕರ ಪ್ರಶಸ್ತಿ” ಗೆ ಆಯ್ಕೆಯಾದ ಶಿಕ್ಷಕರ ಪಟ್ಟಿ ಪ್ರಕಟ

ಬೆಂಗಳೂರು, ಸೆ. 1 (ಕರ್ನಾಟಕ ವಾರ್ತೆ)

2017-18 ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ ವತಿಯಿಂದ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಶಿಕ್ಷಕರಿಗೆ ನೀಡುವ ವಿಶೇಷ ಶಿಕ್ಷಕರ ಪ್ರಶಸ್ತಿಗಳಿಗೆ ಆಯ್ಕೆಯಾದ ಶಿಕ್ಷಕರ ಪಟ್ಟಿ ಇಂತಿದೆ:

ಪ್ರಾಥಮಿಕ ಶಾಲಾ ವಿಭಾಗದಲ್ಲಿ ದಿವಾಕರ, ಎನ್, ಸಹ ಶಿಕ್ಷಕರು (ಟಿ.ಜಿ.ಟಿ.), ಉನ್ನತೀಕರಿಸಿದ ಸ.ಹಿ. ಪ್ರಾ. ಶಾಲೆ, ಅಲ್ಕೆರೆ ಅಗ್ರಹಾರ, ಯಳಂದೂರು ತಾಲೂಕು, ಚಾಮರಾಜನಗರ ಜಿಲ್ಲೆ ಹಾಗೂ ಪ್ರೌಢ ಶಾಲಾ ವಿಭಾಗದಲ್ಲಿ ಶ್ರೀಮತಿ ಸುರೇಖಾ ಜಗನ್ನಾಥ್, ಸಹ ಶಿಕ್ಷಕರು, ಸರ್ಕಾರಿ ಪ್ರೌಢ ಶಾಲೆ, ಬಂದರವಾಡ, ಅಫಜಲ್‌ಪುರ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆ. ಇವರುಗಳಿಗೆ ರಾಜೀವ್ ಗಾಂಧಿ ಸ್ಮಾರಕ ವಿಜ್ಞಾನ ಶಿಕ್ಷಕ ಪ್ರಶಸ್ತಿ ದೊರಕಿದೆ.

ಪ್ರಾಥಮಿಕ ಶಾಲಾ ವಿಭಾಗದಲ್ಲಿ ಕೆ. ಸೀತಾರಾಮಯ್ಯ, ಸಹ ಶಿಕ್ಷಕರು (ಟಿ.ಜಿ.ಟಿ.) ಬಾಲಕಿಯರ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ, ಹೊಸಕೋಟೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಹಾಗೂ ಉಮೇಶ್ ಎಸ್. ವಂಕಲಕುಂಟಿ, ಸಹ ಶಿಕ್ಷಕರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹಿರೇತೆಮ್ಮಿನಾಳ, ಕುಷ್ಟಗಿ ತಾಲ್ಲೂಕು, ಕೊಪ್ಪಳ ಜಿಲ್ಲೆ, ಇವರುಗಳಿಗೆ ವೈಜ್ಞಾನಿಕ ಕ್ಷೇತ್ರದಲ್ಲಿ ವಿಶೇಷ ಶಿಕ್ಷಕ ಪ್ರಶಸ್ತಿ ದೊರಕಿದೆ.

ಪ್ರೌಢಶಾಲಾ ವಿಭಾಗದಲ್ಲಿ ಜಿ.ಪಿ. ಲಿಂಗೇಶಮೂರ್ತಿ, ಸಹ ಶಿಕ್ಷಕರು, ಸರ್ಕಾರಿ ಪದವಿಪೂರ್ವ ಕಾಲೇಜು (ಪ್ರೌಢ ಶಾಲಾ ವಿಭಾಗ) ತಾವರೆಕೆರೆ, ಚನ್ನಗಿರಿ ತಾಲ್ಲೂಕು,

ದಾವಣಗೆರೆ ಜಿಲ್ಲೆ ಹಾಗೂ ದಯಾನಂದ ಡಿ.ಹೆಚ್. ಸಹ ಶಿಕ್ಷಕರು, ಮೃತ್ಯುಂಜಯ ವಿದ್ಯಾಪೀಠದ ದುರ್ಗದ ಪ್ರೌಢಶಾಲೆ, ಹಂಸಭಾವಿ, ಹಿರೇಕೆರೂರು ತಾಲ್ಲೂಕು, ಹಾವೇರಿ ಜಿಲ್ಲೆ ಇವರುಗಳಿಗೆ ವೈಜ್ಞಾನಿಕ ಕ್ಷೇತ್ರದಲ್ಲಿ ವಿಶೇಷ ಶಿಕ್ಷಕ ಪ್ರಶಸ್ತಿ ದೊರಕಿದೆ.

ಪ್ರಾಥಮಿಕ ಶಾಲಾ ವಿಭಾಗದಲ್ಲಿ ಶ್ರೀಮತಿ ಲಲಿತಾ ಮಹಾವೀರ ಕ್ಯಾಸನ್ನವರ್, ಸಹ ಶಿಕ್ಷಕರು, ಸರ್ಕಾರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆ, ಬೆಳಗಾವಿ ನಗರ, ಬೆಳಗಾವಿ ಜಿಲ್ಲೆ ಹಾಗೂ ಶ್ರೀಮತಿ ಎ.ಎಂ. ಉಷಾರಾಣಿ, ಮುಖ್ಯ ಶಿಕ್ಷಕರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕೊತ್ತನೂರು, ಬೆಂಗಳೂರು ದಕ್ಷಿಣ ವಲಯ ಜಿಲ್ಲೆ, ಇವರುಗಳಿಗೆ ಶೈಕ್ಷಣಿಕ ಕ್ಷೇತ್ರದಲ್ಲಿನ ವಿಶೇಷ ಶಿಕ್ಷಕ ಪ್ರಶಸ್ತಿ ಲಭಿಸಿದೆ.

ಪ್ರೌಢಾಶಾಲಾ ವಿಭಾಗದಲ್ಲಿ ಕುಮಾರ್ ಟಿ. ಹೆಚ್. ದೈಹಿಕ ಶಿಕ್ಷಣ ಶಿಕ್ಷಕರು, ಸರ್ಕಾರಿ ಪ್ರೌಢ ಶಾಲೆ, ಕಲಮರಹಳ್ಳಿ, ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಹಾಗೂ ಅನ್ವರುಲ್ಲಾ ಹಸನ್, ಸಹ ಶಿಕ್ಷಕರು, ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜು, (ಪ್ರೌಢಶಾಲಾ ವಿಭಾಗ) ಮುಳಬಾಗಿಲು ತಾಲ್ಲೂಕು, ಕೋಲಾರ ಜಿಲ್ಲೆ ಇವರುಗಳಿಗೆ ಶೈಕ್ಷಣಿಕ ಕ್ಷೇತ್ರದಲ್ಲಿನ ವಿಶೇಷ ಶಿಕ್ಷಕ ಪ್ರಶಸ್ತಿ ಲಭಿಸಿದೆ ಎಂದು ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನದ ಪ್ರಕಟಣೆ ತಿಳಿಸಿದೆ.

ಸಂಖ್ಯೆ 12/138

# "ಸ್ವಚ್ಛ ಸಂಕಲ್ಪದ ಮೂಲಕ ಸ್ವಚ್ಛ ಸಿದ್ಧಿ"

**ಬೆಂಗಳೂರು, ಸೆ. 1: (ಕರ್ನಾಟಕ ವಾರ್ತೆ)**

ಭಾರತ ಸರ್ಕಾರದ **"ಸ್ವಚ್ಛ ಸಂಕಲ್ಪದ ಮೂಲಕ ಸ್ವಚ್ಛ ಸಿದ್ಧಿ"**ಕಾರ್ಯಕ್ರಮದಡಿ ಸ್ವಚ್ಛತೆಯ ಬಗ್ಗೆ ದಿನಾಂಕ ಆಗಸ್ಟ್ 17 ರಿಂದ ಸೆಪ್ಟೆಂಬರ್ 08 ರ ವರೆಗೆ ಜನಾಂದೋಲನವನ್ನು ಹಮ್ಮಿಕೊಳ್ಳಲಾಗಿದೆ. ಈ ಅಂಗವಾಗಿ ಪ್ರಬಂಧ ಸ್ಪರ್ಧೆ, ಕಿರು ಚಿತ್ರ ಸ್ಪರ್ಧೆ ಹಾಗೂ ಚಿತ್ರಕಲಾ ಸ್ಪರ್ಧೆ ಗ್ರಾಮ ಪಂಚಾಯಿತಿ/ತಾಲ್ಲೂಕು/ಜಿಲ್ಲಾ ಪಂಚಾಯತಿ/ರಾಜ್ಯದ ಹಂತಗಳಲ್ಲಿ ಹಮ್ಮಿಕೊಳ್ಳಲು ಉದ್ಧೇಶಿಸಲಾಗಿದೆ.

**ಸ್ವಚ್ಛ ಭಾರತಕ್ಕಾಗಿ ನಾನು ಏನು ಮಾಡಬೇಕು.** (250 ಪದಗಳಲ್ಲಿ) ವಿಷಯದ ಮೇಲೆ ಪ್ರಬಂಧ ಸ್ಪರ್ಧೆ, **ಸ್ವಚ್ಛ ಭಾರತಕ್ಕಾಗಿ ನನ್ನ ಕೊಡುಗೆ** (2 ರಿಂದ 3 ನಿಮಿಷದ ಅವಧಿ) ಕುರಿತು ಕಿರು ಚಿತ್ರ ಸ್ಪರ್ಧೆ ಮತ್ತು ನನ್ನ ಕನಸ್ಸಿನ **ಸ್ವಚ್ಛ ಭಾರತ** ಚಿತ್ರಕಲಾ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ.

ಪ್ರಬಂಧ ಸ್ಪರ್ಧೆ, ಕಿರುಚಿತ್ರ ಸ್ಪರ್ಧೆಗಳನ್ನು ಪ್ರಾದೇಶಿಕ ಭಾಷೆ, ಆಂಗ್ಲ ಮತ್ತು ಹಿಂದಿ ಭಾಷೆಗಳಲ್ಲಿ ಮಂಡಿಸಬಹುದಾಗಿದೆ. ಈ ಪ್ರಕ್ರಿಯೆಯಲ್ಲಿ ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳು, ಶಿಕ್ಷಕರು, ಅಧ್ಯಾಪಕರು, ವೃತ್ತಿಪರರು, ಜನ ಪ್ರತಿನಿಧಿಗಳು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಸಂಘ ಸಂಸ್ಥೆಗಳು, ಗ್ರಾಮ ಪಂಚಾಯಿತಿ ಸಿಬ್ಬಂದಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿ ಮೇಲ್ಕಂಡ ವಿಷಯಗಳ ಕುರಿತು ಪ್ರಬಂಧ ಹಾಗೂ ಕಿರುಚಿತ್ರಗಳನ್ನು ಸಿದ್ಧಪಡಿಸಿ ದಿನಾಂಕ 08.09.2017 ರೊಳಗೆ ಕೇಂದ್ರ ಸರ್ಕಾರದ ವೆಬ್‌ಸೈಟ್ www.mygov.in ನಲ್ಲಿ ಇಂದೀಕರಿಸುವುದು ಅಥವಾ ತಾವು ಸಿದ್ಧಪಡಿಸಿದ ಪ್ರಬಂಧ ಹಾಗೂ ಕಿರುಚಿತ್ರಗಳನ್ನು ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯಿತಿ ಇವರುಗಳಿಗೆ ಹಾರ್ಡ್ ಪ್ರತಿಗಳ ಮೂಲಕ ದಿನಾಂಕ 08.09.2017ರೊಳಗೆ ಸಲ್ಲಿಸಬೇಕಾಗುತ್ತದೆ.

ಮೇಲೆ ತಿಳಿಸಲಾದ ಅಂಶಗಳಿಗೆ ಪ್ರಬಂಧಗಳು, ಕಿರುಚಿತ್ರಗಳು ಹಾಗೂ ಚಿತ್ರಕಲೆಗಳನ್ನು ತಾಲ್ಲೂಕು, ಜಿಲ್ಲೆ ಹಾಗೂ ರಾಜ್ಯ ಮಟ್ಟದಲ್ಲಿ ಪರಿಶೀಲಿಸಿ ಪ್ರತಿ ಕ್ಷೇತ್ರದಲ್ಲಿ ಅತ್ಯುತ್ತಮ 3 ಆಯ್ಕೆಗಳನ್ನು ಪುರಸ್ಕಾರಕ್ಕೆ ಆಯ್ಕೆ ಮಾಡಲಾಗುತ್ತದೆ. ಪುರಸ್ಕಾರಗಳನ್ನು ರಾಷ್ಟ್ರ ಮಟ್ಟದಲ್ಲಿ ಹಾಗೂ ಜಿಲ್ಲಾ ಮತ್ತು ರಾಜ್ಯ ಹಂತದಲ್ಲೂ ಸಹ ಅತ್ಯುತ್ತಮ 3 ಪುರಸ್ಕಾರಗಳನ್ನು ಪ್ರತಿ ವಿಭಾಗದಲ್ಲಿ ನೀಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಸಂಖ್ಯೆ 13/139

# ರಾಷ್ಟ್ರೀಯ ಲೋಕ್ ಅದಾಲತ್

**ಬೆಂಗಳೂರು, ಸೆ. 1: (ಕರ್ನಾಟಕ ವಾರ್ತೆ)**

ರಾಜ್ಯಾದ್ಯಂತ ರಾಷ್ಟ್ರೀಯ ಲೋಕ್ ಅದಾಲತ್‌ನ್ನು ಸೆಪ್ಟೆಂಬರ್ ೯ ರಂದು ಹಮ್ಮಿಕೊಳ್ಳಲಾಗಿದೆ.

ಸದರಿ ಲೋಕ್ ಅದಾಲತ್‌ನಲ್ಲಿ ಸಾರ್ವಜನಿಕರು ನ್ಯಾಯಾಲಯದಲ್ಲಿರುವ ತಮ್ಮ ವ್ಯಾಜ್ಯಗಳನ್ನು / ವ್ಯಾಜ್ಯಪೂರ್ವ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳಲು ಸಂಬಂಧಪಟ್ಟ ಉಚ್ಚ ನ್ಯಾಯಾಲಯ ಕಾನೂನು ಸೇವಾ ಸಮಿತಿಯನ್ನು, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರಗಳನ್ನು, ತಾಲ್ಲೂಕು ಕಾನೂನು ಸೇವಾ ಸಮಿತಿಗಳನ್ನು ಅಥವಾ ಖಾಯಂ ಜನತಾ ನ್ಯಾಯಾಲಯಗಳನ್ನು ಸಂಪರ್ಕಿಸಿ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಪ್ರಕಟಣೆಯಲ್ಲಿ ಕೋರಿದೆ.